# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

(ಹಿಂದಿನ ಪದನಾಮ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ)

ಕುಲಸಚಿವರ ಕಛೇರಿ, ಜ್ಞಾನಶಕ್ತಿ ಆವರಣ, Registrar Office, Torvi

ವಿಜಯಪುರ ☎:08352–229051 www.kswu.ac.in **Fax:** 08352 -229057

---

ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–106/2018–19/1268 ದಿನಾಂಕ:18–07–2018

ಗೆ,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ**: ದಿನಾಂಕ:– 06–07–2018 ರಂದು ಮಧ್ಯಾಹ್ನ 3:00 ಗಂಟೆಗೆ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣ, ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ:– 06–07–2018 ರಂದು ಮಧ್ಯಾಹ್ನ 3:00 ಗಂಟೆಗೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ**
**ಕಾರ್ಯದರ್ಶಿಗಳು**
**ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ**

**ಪ್ರತಿಗಳು:–**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಸರಕಾರದ ಪ್ರದಾನ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20-6-2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ಎನ್.ಚಂದ್ರಪ್ಪ, ಡೀನರು ಶಿಕ್ಷಣ ನಿಕಾಯ. | ಸದಸ್ಯರು | 18-11-2017 | 17-11-2018 |
| 5. | 1(ಇ) | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | ಸದಸ್ಯರು | 11-04-2017 | 10-04-2020 |
| 6. | 1(ಇ) | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | ಸದಸ್ಯರು | 11-04-2017 | 10-04-2020 |
| 7. | 1(ಎಫ್) | ಡಾ.ಅಶೋಕ ಇಟಗಿ | ಸದಸ್ಯರು | 07-12-2017 | 06-12-2018 |
| 8. | 1(ಎಫ್) | ಶ್ರೀ ಬಸವರಾಜ ಬಾದರ್ಲಿ | ಸದಸ್ಯರು | 07-12-2017 | 06-12-2018 |
| 9. | 1(ಎಫ್) | ಡಾ. ಇಸ್ತಾಕಅಹ್ಮದ ಹವಾಲ್ದಾರ್ | ಸದಸ್ಯರು | 07-12-2017 | 06-12-2018 |
| 10. | 1(ಎಫ್) | ನಾಮನಿರ್ದೇಶನವಾಗಿರುವುದಿಲ್ಲ | ಸದಸ್ಯರು | | |
| 11. | 1(ಜಿ) | ಶ್ರೀಮತಿ ಶಾಹಿಸ್ತ ಎಸ್ ಜಮಾದಾರ್ | ಸದಸ್ಯರು | 14-03-2018 | 13-03-2021 |
| 12. | 1(ಜಿ) | ಡಾ.ಬೋರಮ್ಮ ಬಿ ಪೋಲಿಸ್‌ಪಾಟೀಲ | ಸದಸ್ಯರು | 14-03-2018 | 13-03-2021 |
| 13. | 1(ಜಿ) | ಡಾ.ಎಂ.ಎಸ್.ಲಮಾಣಿ | ಸದಸ್ಯರು | 14-03-2018 | 13-03-2021 |
| 14. | 1(ಜಿ) | ಶ್ರೀಮತಿ ಲಕ್ಷ್ಮೀ ಶಾಂತಗೌಡ ದೇಸಾಯಿ | ಸದಸ್ಯರು | 14-03-2018 | 13-03-2021 |
| 15. | 1(ಜಿ) | ಶ್ರೀಮತಿ ಸಾವಿತ್ರಿ ಮಜುಮದಾರ್ | ಸದಸ್ಯರು | 14-03-2018 | 13-03-2021 |
| 16. | 1(ಜಿ) | ಶ್ರೀಮತಿ. ಎಂ.ಎನ್.ಸುಮನ | ಸದಸ್ಯರು | 14-03-2018 | 13-03-2021 |
| 17. | 1(ಹೆಚ್) | ಪ್ರೊ.ಎಸ್.ಬಿ.ಕಾಮಶೆಟ್ಟಿ | ಸದಸ್ಯರು | 5-9-2017 | 4-9-2018 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು(ಮೌ) | ಸದಸ್ಯರು | 4-10-2017 | |
| 23. | ಪ್ರಕರಣ 17(2) | ಪ್ರೊ. ಎಲ್.ಆರ್.ನಾಯಕ, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 4-10-2017 | |

## ದಿನಾಂಕ:06-07-2018 ರಂದು ಮಧ್ಯಾಹ್ನ 3:00ಗಂಟೆಗೆ, ಸಿಂಡಿಕೇಟ್ ಸಭಾಂಗಣ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

### ಸಭೆಗೆ ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಪ್ರೊ.ಎನ್.ಚಂದ್ರಪ್ಪ | : ಸದಸ್ಯರು |
| 3. | ಶ್ರೀಮತಿ ಅರುಣಾಕುಮಾರಿ.ಎಸ್.ಕೆ | : ಸದಸ್ಯರು |
| 4. | ಶ್ರೀಮತಿ ಅನಘಾ ಅಚ್ಯುತ್ ಲಿಮಯೆ | : ಸದಸ್ಯರು |
| 5. | ಶ್ರೀಮತಿ ಶಾಹಿಸ್ತ ಎಸ್ ಜಮಾದಾರ್ | : ಸದಸ್ಯರು |
| 6. | ಡಾ.ಅಶೋಕ ಇಟಗಿ | : ಸದಸ್ಯರು |
| 7. | ಡಾ.ಇಸ್ತಾಕ ಅಹ್ಮದ ಹವಾಲ್ದಾರ್ | : ಸದಸ್ಯರು |
| 8. | ಶ್ರೀ.ಬಸವರಾಜ ಬಾದರ್ಲಿ | : ಸದಸ್ಯರು |
| 9. | ಶ್ರೀ.ಎಂ.ಎಸ್.ಲಮಾಣಿ | : ಸದಸ್ಯರು |
| 10. | ಶ್ರೀಮತಿ ಲಕ್ಷ್ಮೀ ಶಾಂತಗೌಡ ದೇಸಾಯಿ | : ಸದಸ್ಯರು |
| 11. | ಶ್ರೀಮತಿ ಸಾವಿತ್ರಿ ಮಜುಮದಾರ್ | : ಸದಸ್ಯರು |
| 12. | ಶ್ರೀಮತಿ.ಎಂ.ಎನ್.ಸುಮನ್ | : ಸದಸ್ಯರು |
| 13. | ಪ್ರೊ.ಎಸ್.ಬಿ.ಮಾಡಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 14. | ಪ್ರೊ.ಎಲ್.ಆರ್.ನಾಯಕ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

### ಸಭೆಗೆ ಗೈರು ಹಾಜರಾದ ಸದಸ್ಯರು

| | | |
|---|---|---|
| 1. | ಡಾ.ಬೋರಮ್ಮ ಬಿ ಪೋಲಿಸ್ ಪಾಟೀಲ | : ಸದಸ್ಯರು |
| 2. | ಪ್ರೊ.ಎಸ್.ಬಿ.ಕಾಮಶೆಟ್ಟಿ | : ಸದಸ್ಯರು |
| 3. | ಶ್ರೀ.ಡಿ.ಎಂ.ನಿಡವಣಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 4. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 7. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 8. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

## ದಿನಾಂಕ: 06-07-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

- **ದಿನಾಂಕ: 25-05-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.**

  **ನಿರ್ಣಯ:- ದಿನಾಂಕ:25-05-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು.**

- **ದಿನಾಂಕ: 15-03-2018 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.**

  **ನಿರ್ಣಯ:- ದಿನಾಂಕ:15-03-2018 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಒಪ್ಪಿಕೊಳ್ಳಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 01*

ವಿಷಯ: ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 2017-18 ನೇ ವರ್ಷದ ಕರಡು ವಾರ್ಷಿಕ ವರದಿ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000 ಪ್ರಕರಣ 50ರನ್ವಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 2017-18ನೇ ವರ್ಷದ ಕರಡು ವಾರ್ಷಿಕ ವರದಿಯನ್ನು ದಿನಾಂಕ:18-06-2018 ರಂದು ಜರುಗಿದ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಮಂಡಿಸಿ ಅನುಮೋದಿಸಲಾಯಿತು ಈಗ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- 2017-18ನೇ ಸಾಲಿನ ವರ್ಷದ ಕರಡು ವಾರ್ಷಿಕ ವರದಿಯನ್ನು ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ: 02*

ವಿಷಯ: ಹಣಕಾಸು ಸಮಿತಿಯ ಸದಸ್ಯರೆಂದು ನಾಮನಿರ್ದೇಶನ ಮಾಡುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000 ಪ್ರಕರಣ 32(v)ರನ್ವಯ ಶ್ರೀಮತಿ.ಎಂ.ಎನ್.ಸುಮನ, ಸಿಂಡಿಕೇಟ್ ಸದಸ್ಯರು, ಅಮವಿವಿ ಅವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಘಟನೋತ್ತರ ಅನುಮೋದನೆ ನೀಡಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 03*

ವಿಷಯ:- ಮಹಿಳಾ ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಎರಡು ವರ್ಷದ ಅವಧಿಗೆ ಮುಖ್ಯಸ್ಥರ ನೇಮಕಾತಿ ಮಾಡಿರುವ ಕುರಿತು.

ಉಲ್ಲೇಖ:- 1. ಸಿಂಡಿಕೇಟ ಸಭೆಯ ಗೊತ್ತುವಳಿ ಸಂಖ್ಯೆ:08, ದಿನಾಂಕ: 04-06-2016.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ನಿಯಮ34(5)(6)(7)
3. ಕಛೇರಿ ಅಧಿಸೂಚನೆ ಸಂಖ್ಯೆ: ಕರಾಮವಿವಿ/ಆಡಳಿತ-1/ಬೋಸಿ/2016-17/686, ದಿ: 29-06-2016.
4. ಕಛೇರಿ ಅಧಿಸೂಚನೆ ಸಂಖ್ಯೆ: ಕರಾಮವಿವಿ/ಆಡಳಿತ-1/ಬೋಸಿ/2016-17/951, ದಿ: 28-06-2018.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಉಲ್ಲೇಖ 1 ರ ನಿಯಮವನ್ನಾಧರಿಸಿ ಹಾಗೂ ಉಲ್ಲೇಖ 2 ರ ಜೇಷ್ಠತೆಗನುಗುಣವಾಗಿ ಉಲ್ಲೇಖ 3 ರನ್ವಯ ಆಯಾ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನು ನೇಮಕ ಮಾಡಿದ್ದು, ಅವರ ಎರಡು ವರ್ಷದ ಅವಧಿಯು ದಿನಾಂಕ: 29-06-2018 ಕ್ಕೆ ಪೂರ್ಣಗೊಳ್ಳುವುದರಿಂದ ಉಲ್ಲೇಖ:4ರನ್ವಯ ಅಧಿಸೂಚನೆಯನ್ನು ಹೊರಡಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

***ನಿರ್ಣಯ:- ದಿನಾಂಕ:28-06-2018ರಂದು ಹೊರಡಿಸಿರುವ ಅಧಿಸೂಚನೆಗೆ ಘಟನೋತ್ತರ ಅನುಮೋದಿಸಲಾಯಿತು. ವಿವರ ಈ ಕೆಳಗಿನಂತಿದೆ.***

| ಅಸಂ | ಬೋಧಕ ಸಿಬ್ಬಂದಿಯ ಹೆಸರು | ವಿಭಾಗದ ಹೆಸರು | ಪದನಾಮ |
|---|---|---|---|
| 1. | ಪ್ರೊ. ಎಸ್. ಎ. ಖಾಜಿ | ಸಮಾಜ ಕಾರ್ಯ | ಪ್ರಾಧ್ಯಾಪಕರು |
| 2. | ಪ್ರೊ.ಪಿ.ಕನ್ನನ್ | ಕನ್ನಡ | ಪ್ರಾಧ್ಯಾಪಕರು |
| 3. | | ಇಂಗ್ಲೀಷ | |
| 4. | ಪ್ರೊ.ವಿಜಯಾ ಬಿ ಕೋರಿಶೆಟ್ಟಿ | ಸಮಾಜಶಾಸ್ತ್ರ | ಪ್ರಾಧ್ಯಾಪಕರು |
| 5. | | ಆಹಾರ ಸಂಸ್ಕರಣ | |
| 6. | ಪ್ರೊ. ಪಿ. ಜಿ. ತಡಸದ | ಅರ್ಥಶಾಸ್ತ್ರ | ಪ್ರಾಧ್ಯಾಪಕರು |
| 7. | | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | ಪ್ರಾಧ್ಯಾಪಕರು |
| 8. | ಪ್ರೊ. ಅಜೀಜ ಮಕಾಂದಾರ | ಬಯೋ-ಇನ್ಫಾರ್ಮೆಟಿಕ್ಸ್ | ಪ್ರಾಧ್ಯಾಪಕರು |
| 9. | | ಫಾರ್ಮಾಸ್ಯೂಟಿಕಲ್ ಕೆಮಿಸ್ಟ್ರೀ | |
| 10. | | ವಿದ್ಯುನ್ಮಾನ ವಿಭಾಗ | |
| 11. | ಪ್ರೊ.ಎಸ್.ಬಿ.ಕಾಮಶೆಟ್ಟಿ | ವ್ಯವಹಾರ (ಎಂ.ಬಿ.ಎ.) | ಪ್ರಾಧ್ಯಾಪಕರು |
| 12. | | ವಾಣಿಜ್ಯ (ಎಂ.ಕಾಂ) | |
| 13. | ಪ್ರೊ. ಆರ್. ಸುನಂದಮ್ಮ | ಮಹಿಳಾ ಅಧ್ಯಯನ | ಪ್ರಾಧ್ಯಾಪಕರು |
| 14. | ಪ್ರೊ. ಓಂಕಾರಗೌಡ ಕಾಕಡೆ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಪ್ರಾಧ್ಯಾಪಕರು |
| 15. | ಶ್ರೀ ರಮೇಶ ಕೆ | ಗಣಕ ವಿಜ್ಞಾನ | ಪ್ರಾಧ್ಯಾಪಕರು |

## *ಸಿಂಡಿಕೇಟ್ ಐಟಂ ಸಂಖ್ಯೆ : 04*

**ವಿಷಯ:** ತಾತ್ಕಾಲಿಕ ಆಧಾರದ ಮೇರೆಗೆ "Technical Assistant and Scientific Assistant" ನೇಮಕದ ಕುರಿತು.

**ವಿಷಯ:** ಅಧಿಸೂಚನೆ ಪತ್ರ ಸಂ:ಅಮವಿವಿ/ಆಡಳಿತ/ತಾಂತ್ರಿಕ ಸಿಬ್ಬಂದಿ/2018-19/441 ದಿನಾಂಕ:22-05-2018

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಆರ್ಥಿಕ ವಿಭಾಗ ಹಾಗೂ ಕೌಶಲ್ಯ ಪಾರ್ಕನಲ್ಲಿ ತಾತ್ಕಾಲಿಕ ನೆಲೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸಲು ದಿನಾಂಕ:4-6-

2018ರಂದು Walk in Interview ಏರ್ಪಡಿಸಲಾಗಿತ್ತು. ತಾತ್ಕಾಲಿಕ ನೇಮಕಾತಿ ಆಯ್ಕ ಸಮಿತಿಯ ಶಿಫಾರಸ್ಸಿನ ಮೇರೆಗೆ Shri NoohAllah T Pathan, Technical Assistant, & Shri Sangamnath Ganiger, Scientific Assistant, ಅವರುಗಳಿಗೆ ನೇಮಕ ಮಾಡಿದ ವಿಷಯವನ್ನು ,ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಘಟನೋತ್ತರ ಅನುಮೋದನೆ ನೀಡಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 05*

**ವಿಷಯ: ಶ್ರೀಮತಿ ಪಾರ್ವತಮ್ಮ ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು**

ಪ್ರೊ. ರತ್ನಾ ನಾಯಕ್, Mysuru, ಅವರು ಎಂ.ಎ ಮಹಿಳಾ ಅಧ್ಯಯನದ ಪಠ್ಯಕ್ರಮದ 'ಸ್ತ್ರೀವಾದಿ ಸಂಶೋಧನಾ ವಿಧಾನ' ಪತ್ರಿಕೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರಥಮ ಪ್ರಯತ್ನದಲ್ಲಿ ಪಾಸಾಗುವ ವಿದ್ಯಾರ್ಥಿನಿಗೆ **ಶ್ರೀಮತಿ ಪಾರ್ವತಮ್ಮ** ಇವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ. 50,000/- ಸಿಂಡಿಕೇಟ್ ಬ್ಯಾಂಕ್ cheque ನ್ನು (Dr. Hemalata H.M) ನೀಡಿರುತ್ತಾರೆ, ಕಾರಣ 2018-19 ನೇ ರಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯ ಒಪ್ಪಿಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

***ನಿರ್ಣಯ:- 2017-18ನೇ ಸಾಲಿಗೆ ಅನ್ವಯಿಸುವಂತೆ ಎಂ.ಎ ಮಹಿಳಾ ಅಧ್ಯಯನದ ಪಠ್ಯಕ್ರಮದ 'ಸ್ತ್ರೀವಾದಿ ಸಂಶೋಧನಾ ವಿಧಾನ' ಪತ್ರಿಕೆಯಲ್ಲಿ ಅತಿ ಹೆಚ್ಚು ಅಂಕ ಪಡೆದ, ಪ್ರಥಮ ಪ್ರಯತ್ನದಲ್ಲಿ ಪಾಸಾಗುವ ವಿದ್ಯಾರ್ಥಿನಿಗೆ ಶ್ರೀಮತಿ ಪಾರ್ವತಮ್ಮ ಇವರ ಹೆಸರಿನಿಂದ ಚಿನ್ನದ ಪದಕ ನೀಡಲು ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 06*

**ವಿಷಯ:** ಮೌಲ್ಯಮಾಪಕರಿಗೆ ದಿನಭತ್ಯೆ ಹಾಗೂ ಉತ್ತರ ಪತ್ರಿಕೆಗಳ ಸಂಭಾವನೆಯ ದರಗಳನ್ನು ಪರಿಷ್ಕೃತಗೊಳಿಸುವ ಕುರಿತು.

**ಉಲ್ಲೇಖ:** ಅಮವಿವಿ/ಪರೀಕ್ಷಾ/ನಡವಳಿ/2018-19/104 ದಿನಾಂಕ:06-04-2018.

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಭಂಧಿಸಿದಂತೆ, ಸ್ನಾತಕ ಬಿ.ಎಡ್ ಹಾಗೂ ಸ್ನಾತಕೋತ್ತರ ಲಿಖಿತ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪಕರಿಗೆ ಪ್ರಸ್ತುತ ಇರುವ ದಿನಭತ್ಯೆಯ ದರ ಹಾಗೂ Non UGC ಮೌಲ್ಯಮಾಪಕರಿಗೆ ಪ್ರತಿ ಉತ್ತರ ಪತ್ರಿಕೆಗೆ ಸಂಭಾವನೆಯದರಗಳನ್ನು ಪರಿಷ್ಕೃತ ಮಾಡಿ,ಸದರಿ ಒಂದು ದಿನಕ್ಕೆ **40** ಪತ್ರಿಕೆಗಳ ಮೌಲ್ಯಮಾಪನ ಮಾಡುವ ಷರತ್ತಿನೊಂದಿಗೆ ಈ ಕೆಳಗಿನಂತೆ ಆದೇಶಿಸಲಾಗಿದೆ. (ಈ ದರಗಳು ಸರಕಾರದ ಪರಿಷ್ಕೃತ ದರಗಳು ಬರುವವರೆಗೆ ಅಥವಾ ಮುಂದಿನ ಎರಡು ವರ್ಷಗಳವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಯುತ್ತಿದ್ದು.)

**ಪರಿಷ್ಕೃತ ಸಂಭಾವನೆಯ ದರಗಳು ಮೇ-2018 ರಿಂದ ಅನ್ವಯವಾಗುವಂತೆ ಆದೇಶ ಹೊರಡಿಸಲಾಗಿದೆ.**

| ಕ್ರ.ಸಂ | ವಿವರ | ಪ್ರಸ್ತುತ ಇರುವ ಸಂಭಾವನೆ | ಪರಿಷ್ಕೃತ ಸಂಭಾವನೆಯದರ |
|---|---|---|---|
| 1 | ಸ್ನಾತಕ,ಬಿ.ಎಡ್ ಹಾಗೂ ಸ್ನಾತಕೋತ್ತರ ಲಿಖಿತ ಉತ್ತರ ಪತ್ರಿಕೆಗಳ (UGC/ Non UGC) ಮೌಲ್ಯಮಾಪಕರಿಗೆ ದಿನ ಭತ್ಯೆ ದರ. | ಸ್ಥಳಯರಿಗೆ ರೂ. 800.00<br>ಹೊರಗಿನವರಿಗೆ ರೂ. 1000.00 | ಸ್ಥಳಯರಿಗೆ ರೂ. 800.00<br>ಹೊರಗಿನವರಿಗೆ ರೂ. 1100.00 |
| 2 | Non UGC ಮೌಲ್ಯಮಾಪಕರಿಗೆ. | ಪ್ರತಿ ಉತ್ತರ ಪತ್ರಿಕೆಗೆ ರೂ.12.00 | ಪ್ರತಿ ಉತ್ತರ ಪತ್ರಿಕೆಗೆ ರೂ. 14.00 |

| | | (ಪ್ರತಿ ದಿನಕ್ಕೆ 30 ಉತ್ತರ ಪತ್ರಕೆಗಳು) | (ಪ್ರತಿ ದಿನಕ್ಕೆ 40 ಉತ್ತರ ಪತ್ರಕೆಗಳು) |
|---|---|---|---|

ಈ ವಿಷಯ ಘಟನೋತ್ತರ ಆದೇಶಕ್ಕಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ.

*ನಿರ್ಣಯ:– ಘಟನೋತ್ತರ ಅನುಮೋದನೆ ನೀಡಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 07*

ವಿಷಯ: ಸ್ನಾತಕೋತ್ತರ ಪರೀಕ್ಷೆಗಳ ಏಕ ಮೌಲ್ಯಮಾಪನ ಕಾರ್ಯ ಮಾಡುವ ಕುರಿತು.

ಜೂನ್–2018ರಿಂದ ಜರುಗುವ ಎಲ್ಲ ಅಧ್ಯಯನ ವಿಭಾಗಗಳ ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೋಮಾ, ಹಾಗೂ ಬಿಪಿ.ಇಡ್ ಮೌಲ್ಯಮಾಪನ ಕಾರ್ಯದಲ್ಲಿ ಪ್ರಸ್ತುತ ಡಬಲ್ ವ್ಯಾಲ್ಯೂವೆಷನ್ ಮಾಡಲಾಗುತ್ತಿದೆ. ಹಾಗೂ ಎರಡು ಮೌಲ್ಯಮಾಪನಗಳಲೂ ಶೇ.20% ಅಂಕಗಳ ವ್ಯತ್ಯಾಸವಿದ್ದಾಗ ತೃತೀಯ ಮೌಲ್ಯಮಾಪನ ಜಾರಿಯಲ್ಲಿರುತ್ತದೆ. ಇದರ ಬದಲಿಗೆ 1ನೇ, 2ನೇ & 3ನೇ ಸೆಮಿಸ್ಟರ್‌ಗೆ ಅನ್ವಯಿಸುವಂತೆ (ನಾಲ್ಕನೇ ಸೆಮಿಸ್ಟರ್ ಹೊರತು ಪಡಿಸಿ) ಈಗಿರುವ ಹಾಲಿ ಪದ್ಧತಿಯನ್ನು ರದ್ದುಗೊಳಿಸಿ ಏಕ ಮೌಲ್ಯಮಾಪನ (Single Valuation) ಪದ್ಧತಿಯನ್ನು ಜಾರಿಗೊಳಿಸಲು ಮತ್ತು ಮರು ಮೌಲ್ಯಮಾಪನ (Revaluation)ಕ್ಕೆ ಅವಕಾಶ ಮಾಡಿಕೊಡಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ವಿದ್ಯಾವಿಷಯಕ ಪರಿಷತ್ ನಿರ್ಣಯ:–*

**2017–18ನೇ ಶೈಕ್ಷಣಿಕ ಸಾಲಿನಿಂದ ಅನ್ವಯಿಸುವಂತೆ ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೋಮಾ, ಅಧ್ಯಯನ ವಿಭಾಗಗಳಿಗೆ 1ನೇ& 3ನೇ ಸೆಮಿಸ್ಟರ್‌ಗೆ ಮಾತ್ರ ಡಬಲ್ ವ್ಯಾಲ್ಯೂವೆಷನ್(double Valuation) ಹಾಗೂ 2ನೇ & 4ನೇ ಸೆಮಿಸ್ಟರ್‌ಗೆ ಏಕ ಮೌಲ್ಯಮಾಪನ (Single Valuation) ಪದ್ಧತಿಯನ್ನು ಜಾರಿಗೊಳಿಸಲು ಮತ್ತು ಮರು ಮೌಲ್ಯಮಾಪನ (Revaluation)ಕ್ಕೆ ಅವಕಾಶ ಮಾಡಿಕೊಡಲು ಅನುಮೋದಿಸಲಾಯಿತು.**

*ಸಿಂಡಿಕೇಟ್ ನಿರ್ಣಯ:–*

*ವಿದ್ಯಾವಿಷಯಕ ಪರಿಷತ್‌ನ ನಿರ್ಣಯವನ್ನು ಒಪ್ಪಿಕೊಳ್ಳಲಾಯಿತು.*

## *ಸಿಂಡಿಕೇಟ್ ಐಟಂ ಸಂಖ್ಯೆ : 08*

ವಿಷಯ:– ವಿಚಾರ ಸಂಕಿರಣ, ಸಮ್ಮೇಳನ, ವಿಚಾರ ಗೋಷ್ಠಿಯಲ್ಲಿ ಭಾಗವಹಿಸುವವರಿಗೆ ನೀಡುವ ಪ್ರಯಾಣ ಭತ್ಯೆ/ದಿನ ಭತ್ಯೆ ಆಸನ ಭತ್ಯೆ ಹಾಗೂ ಸಂಭಾವನೆಯನ್ನು ಪರಿಷ್ಕರಿಸುವ ಕುರಿತು.

1. ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್‌ನ ಸದಸ್ಯರು, ಸಿಂಡಿಕೇಟ್/ವಿದ್ಯಾವಿಷಯಕ ಪರಿಷತ್‌ನ ಸಭೆಗೆ ಹಾಜರಾದಾಗ ಕಿ.ಮೀ ರೂ.14/–ಯಂತೆ ಪ್ರಯಾಣ ಭತ್ಯೆ, 2000/– ಆಸನ ಭತ್ಯೆ ಹಾಗೂ ಸದರಿ ಸದಸ್ಯರು ಉಪ–ಸಮಿತಿಗಳಿಗೆ ಹಾಜರಾದಾಗ ಪ್ರಯಾಣ ಭತ್ಯೆ ಕಿ.ಮೀ ರೂ.14/–ರಂತೆ ಆಸನ ಭತ್ಯೆ ರೂ.1000/– ನಿಗದಿಪಡಿಸಲಾಗಿದೆ.
2. ವಿಶ್ವವಿದ್ಯಾಲಯದಲ್ಲಿ ಜರುಗಲಿರುವ ಅಂತರ್‌ರಾಷ್ಟ್ರೀಯ ಸೆಮಿನಾರ್/ಸಮ್ಮೇಳನಕ್ಕೆ/ ಘಟಿಕೋತ್ಸವ/ ಸಂಸ್ಥಾಪನಾ ದಿನ ವಿಶ್ವವಿದ್ಯಾನಿಲಯವೇ ಆಯೋಜಿಸಿದ ಕಾರ್ಯಕ್ರಮಗಳಿಗೆ ಮುಖ್ಯ ಅತಿಥಿಯಾಗಿ, University Review ಸಮಿತಿ ಸದಸ್ಯರಾಗಿ ಆಗಮಿಸುವವರಿಗೆ Actual Airfare(Economy

Class)+Actual Local Convence ಅಥವಾ Ist AC Sleeper/ 2 ಟಾಯರ್ ಎಸಿ ಅಥವಾ ಪ್ರತಿ ಕಿ.ಮೀ ರೂ.14ರಂತೆ ಹಾಗೂ ಸಂಭಾವನೆ ರೂ.5000/– ನಿಗದಿಪಡಿಸಲಾಗಿದೆ.

3. ರಾಷ್ಟ್ರೀಯ ಸೆಮಿನಾರ್/ಸಮ್ಮೇಳನಕ್ಕೆ ಅತಿಥಿಯಾಗಿ, ಅಂತರ್‌ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸುವವರಿಗೆ ಸ್ವಂತ ವಾಹನಕ್ಕೆ ಪ್ರತಿ ಕಿ.ಮೀ. ರೂ.9/–ರಂತೆ ಅಥವಾ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಮಾನದ ಟಿಕೇಟು(Airfare) ಪಾವತಿಸಲು ಹಾಗೂ ಸಂಭಾವನೆ ರೂ.3000/– ನಿಗದಿಪಡಿಸಲಾಗಿದೆ.
4. ರಾಜ್ಯ ವಿಚಾರಸಂಕಿರಣ/ಸಮ್ಮೇಳನ/ಕಾರ್ಯಾಗಾರಗಳಲ್ಲಿ ಮುಖ್ಯ ಅತಿಥಿ, ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವವರಿಗೆ 2 ಟಾಯರ್ ಎಸಿ ರೈಲು ಟಿಕೇಟ್ ಸಲ್ಲಿಸಿದಲ್ಲಿ ಅದರ ಮೊತ್ತ ಪಾವತಿಸಬೇಕು. ಅಥವಾ ಸ್ವಂತ ಕಾರ್ ತಂದರೆ ಪ್ರತಿ ಕಿ.ಮೀ ರೂ.6/– ಬಾಡಿಗೆಕಾರ್ ತಂದರೆ ಪ್ರತಿ ಕಿ.ಮೀ. ರೂ.9/–ರ ಮಿತಿಗೆ ಒಳಪಡಿಸಿ, ವಿಚಾರಸಂಕಿರಣ/ಸಮ್ಮೇಳನ/ಕಾರ್ಯಾಗಾರಗಳ ಉದ್ಘಾಟಕರು & ಮುಖ್ಯ ಅತಿಥಿಗಳಿಗೆ ಸಂಭಾವನೆ ರೂ.3000/– ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ರೂ.2000/– ನಿಗದಿಪಡಿಸಲಾಗಿದೆ.
5. ಬಿಓಎ ಸಮಿತಿ ಸಭೆಗೆ ಹಾಜರಾಗಿದ್ದ ಸದಸ್ಯರುಗಳಿಗೆ ಪ್ರತಿ ಕಿ.ಮೀ. ರೂ.14/–ರಂತೆ ಅಥವಾ 2 ಟಾಯರ್ ಎಸಿ ರೈಲು ಟಿಕೇಟ್ ಅಥವಾ ವಿಮಾನದ ಟಿಕೇಟು(Airfare) ಸಲ್ಲಿಸಿದ್ದಲ್ಲಿ ಅದನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪಾವತಿಸಲು ಹಾಗೂ ಸಂಭಾವನೆ ರೂ.3000/– ನಿಗದಿಪಡಿಸಲಾಗಿದೆ.
6. ಬಿಓಎಸ್ ಸಭೆಗಳಿಗೆ ಹಾಜರಾಗಿದ್ದ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಕಿ.ಮೀ ರೂ.3/–ಯಂತೆ ಅಥವಾ ಸದಸ್ಯರು 2 ಟಾಯರ್ ಎಸಿ ಬಿಲ್ಲ್ ನೀಡಿದಲ್ಲಿ, ಬಿಲ್ಲ್‌ನಲ್ಲಿ ಇರುವ ಮೊತ್ತವನ್ನು ಮತ್ತು ಡಿಎ 500/–ರಂತೆ ಪಾವತಿಸಲು ನಿಗದಿಪಡಿಸಲಾಗಿದೆ.
7. ಬಿಓಇ ಸಭೆಗಳಿಗೆ ಹಾಜರಾಗಿದ್ದ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಕಿ.ಮೀ ರೂ.3/–ಯಂತೆ ಅಥವಾ ಸದಸ್ಯರು 2 ಟಾಯರ್ ಎಸಿ ಬಿಲ್ಲ್ ನೀಡಿದಲ್ಲಿ, ಬಿಲ್ಲ್‌ನಲ್ಲಿ ಇರುವ ಮೊತ್ತವನ್ನು ಮತ್ತು ಡಿಎ 500/–ರಂತೆ ಪಾವತಿಸಲು ನಿಗದಿಪಡಿಸಲಾಗಿದೆ.
8. ಡಾಕ್ಟರಲ್ ಸಮಿತಿ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಪ್ರಯಾಣ ಭತ್ಯೆ ಸ್ವಂತ ವಾಹನಕ್ಕೆ ಕಿ.ಮೀ ರೂ.6/–ಯಂತೆ ಅಥವಾ ಸದಸ್ಯರು 2 ಟಾಯರ್ ಎಸಿ ಬಿಲ್ಲ್ ನೀಡಿದಲ್ಲಿ, ಬಿಲ್ಲ್‌ನಲ್ಲಿ ಇರುವ ಮೊತ್ತವನ್ನು ಮತ್ತು ಡಿಎ 500/–ರಂತೆ ನಿಗದಿಪಡಿಸಲಾಗಿದೆ.
9. ಪಿಎಚ್.ಡಿ ಮೌಖಿಕ ಪರೀಕ್ಷೆಗೆ ವಿಷಯ ತಜ್ಞರಾಗಿ ಆಗಮಿಸಿರುವವರಿಗೆ ಪ್ರಯಾಣ ಭತ್ಯೆ ಸ್ವಂತ ವಾಹನಕ್ಕೆ ಪ್ರತಿ ಕಿ.ಮೀ. ರೂ.6/– ರಂತೆ ಅಥವಾ ಬಾಡಿಗೆ ವಾಹನಕ್ಕೆ ಪ್ರತಿ ಕಿ.ಮೀ. ರೂ.9/–ಕ್ಕೆ ಮೀರದಂತೆ ಪಾವತಿಸುವುದು. ಹಾಗೂ ಬಾಹ್ಯ ವಿಷಯ ತಜ್ಞರಿಗೆ ಮೌಖಿಕ ಪರೀಕ್ಷೆಯ ಸಂಭಾವನೆ ರೂ.1000/– ನಿಗದಿಪಡಿಸಲಾಗಿದೆ.
10. ಸಲಹಾ ಸಮಿತಿ ಸಭೆಗೆ ತಜ್ಞರು/ಪ್ರತಿನಿಧಿಗಳು/ಪ್ರಾಂಶುಪಾಲರು ಸದಸ್ಯರುಗಳಾಗಿ ಭಾಗವಹಿಸಿದರೆ ಪ್ರಯಾಣ ಭತ್ಯೆ ಕಿ.ಮೀ ರೂ.3/–ಯಂತೆ ಅಥವಾ ಸದಸ್ಯರು 2 ಟಾಯರ್ ಎಸಿ ಬಿಲ್ಲ್ ನೀಡಿದಲ್ಲಿ, ಬಿಲ್ಲ್‌ನಲ್ಲಿ ಇರುವ ಮೊತ್ತವನ್ನು ಪಾವತಿಸಲು ಹಾಗೂ ಸಂಭಾವನೆ ರೂ.500/–ನೀಡಲು ನಿಗದಿಪಡಿಸಲಾಗಿದೆ.

ಈ ವಿಷಯವು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 09*

ವಿಷಯ:2018–19 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ. ಬಿ.ಪಿ.ಎಡ್, ಸರ್ಟಿಫಿಕೇಟ್ ಕೋರ್ಸು, ಬಾಹ್ಯಮೂಲ ಸ್ಕೀಮ್, ವಲಸೆ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪ್ರಮಾಣ ಪತ್ರಗಳ ಶುಲ್ಕಗಳ ಕುರಿತು.

ಪ್ರತಿ ವರ್ಷದಂತೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ 2018-19 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ. ಬಿ.ಪಿ.ಎಡ್, ಸರ್ಟಿಫಿಕೇಟ್ ಕೋರ್ಸು, ಬಾಹ್ಯಮೂಲ ಸ್ಕೀಮ್, ವಲಸೆ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪ್ರಮಾಣ ಪತ್ರಗಳ ಶುಲ್ಕಗಳನ್ನು ಶೇ 10 ರಷ್ಟು ಹೆಚ್ಚಿಸಿದ್ದನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-* **2018-19 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ. ಬಿ.ಪಿ.ಎಡ್, ಸರ್ಟಿಫಿಕೇಟ್ ಕೋರ್ಸು, ಬಾಹ್ಯಮೂಲ ಸ್ಕೀಮ್, ವಲಸೆ ಪ್ರಮಾಣ ಪತ್ರ ಮತ್ತು ವರ್ಗಾವಣೆ ಪ್ರಮಾಣ ಪತ್ರಗಳ ಶುಲ್ಕಗಳನ್ನು ಶೇ 10 ರಷ್ಟು ಹೆಚ್ಚಿಸಿದ್ದನ್ನು ಅನುಮೋದಿಸಲಾಯಿತು.**

## *ಸಿಂಡಿಕೇಟ್ ಐಟಂ ಸಂಖ್ಯೆ : 10*

ವಿಷಯ: ಮಹಿಳಾ ವಿಶ್ವವಿದ್ಯಾನಿಲಯದ ಪಜಾ/ಪಪಂದ ಒಬ್ಬ ಪ್ರಾಧ್ಯಾಪಕರಿಗೆ ಹಾಗೂ ಎರಡು ಸಂಶೋಧನಾ ವಿದ್ಯಾರ್ಥಿನಿಯರಿಗೆ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯದ ಡಾ. ಬಿ.ಆರ್ ಅಂಬೇಡ್ಕರ ಅಧ್ಯಯನ ಕೇಂದ್ರಕ್ಕೆ ಭೇಟಿ ನೀಡಲು ಅನುಮತಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪಜಾ/ಪಪಂದ ಸೇರಿದ ಒಬ್ಬ ಪ್ರಾಧ್ಯಾಪಕರಿಗೆ ಹಾಗೂ ಎರಡು ಸಂಶೋಧನಾ ವಿದ್ಯಾರ್ಥಿನಿಯರು ದಿನಾಂಕ:23-07-2018 ರಿಂದ ದಿನಾಂಕ:30-07-2018 ರವರೆಗೆ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯದ ಡಾ. ಬಿ.ಆರ್ ಅಂಬೇಡ್ಕರ ಅಧ್ಯಯನ ಕೇಂದ್ರಕ್ಕೆ ಭೇಟಿ ನೀಡಲು ಸದರಿಯವರಿಗೆ ಯುಜಿಸಿ ನಿಯಮಾವಳಿ ಪ್ರಕಾರ ದಿನಭತ್ಯೆ, ಪ್ರಯಾಣ ಭತ್ಯೆ, ವಸತಿ ನೋಂದಣಿ ಶುಲ್ಕ, ವೀಸಾ ಶುಲ್ಕ, ಸ್ಥಳೀಯ ಸಾರಿಗೆ ಮತ್ತು ಇತರೆ ಖರ್ಚುಗಳಿಗೆ ಧನಸಹಾಯ ನೀಡಲು ಮತ್ತು ಸದರಿಯವರಿಗೆ ಹೋಗಿಬರಲು ಅನುಮತಿ ನೀಡಲು ಸಿಂಡಿಕೇಟ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**ಸಹಾಯಕ ಪ್ರಾಧ್ಯಾಪಕ ಹಾಗೂ ಸಂಶೋಧನಾ ವಿದ್ಯಾರ್ಥಿನಿಯರ ವಿವರ ಈ ಕೆಳಗಿನಂತಿದೆ.**

| | | |
|---|---|---|
| 1) | ಶ್ರೀ ದೀಪಕ ಶಿಂಧೆ | ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ಅಧ್ಯಯನ ವಿಭಾಗ |
| 2) | ಕು: ಅನಿತಾ ಪಾತ್ರೋಟ | ಸಂಶೋಧನಾ ವಿದ್ಯಾರ್ಥಿನಿ ಗಣಕ ಅಧ್ಯಯನ ವಿಭಾಗ, |
| 3) | ಕು: ಡಿ ಸರಸ್ವತಿ | ಸಂಶೋಧನಾ ವಿದ್ಯಾರ್ಥಿನಿ ಮಹಿಳಾ ಅಧ್ಯಯನ ವಿಭಾಗ, |

***ನಿರ್ಣಯ:- ಶ್ರೀ ದೀಪಕ ಶಿಂಧೆ, ಪ್ರಾಧ್ಯಾಪಕರು, ಇಂಗ್ಲೀಷ ಅಧ್ಯಯನ ವಿಭಾಗ, ಕು.ಅನಿತಾ ಪಾತ್ರೋಟ, ಸಂಶೋಧನಾ ವಿದ್ಯಾರ್ಥಿನಿ ಗಣಕ ಅಧ್ಯಯನ ವಿಭಾಗ ಮತ್ತು ಕು.ಡಿ.ಸರಸ್ವತಿ ಸಂಶೋಧನಾ ವಿದ್ಯಾರ್ಥಿನಿ ಮಹಿಳಾ ಅಧ್ಯಯನ ವಿಭಾಗ ಇವರೆಗೆ. ದಿನಾಂಕ:23-07-2018 ರಿಂದ ದಿನಾಂಕ:30-07-2018 ರವರೆಗೆ ಅಮೇರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯದ ಡಾ. ಬಿ.ಆರ್ ಅಂಬೇಡ್ಕರ ಅಧ್ಯಯನ ಕೇಂದ್ರಕ್ಕೆ ಹಾಗೂ ಇತರೆ ಸ್ಥಳಗಳಿಗೆ ಭೇಟಿ ಹೋಗಿಬರಲು ಅನುಮತಿ ನೀಡಲಾಯಿತು. ಸದರಿಯವರಿಗೆ ಯುಜಿಸಿ ನಿಯಮಾವಳಿ ಪ್ರಕಾರ ದಿನಭತ್ಯೆ, ಪ್ರಯಾಣ ಭತ್ಯೆ, ನೋಂದಣಿ ಶುಲ್ಕ, ವೀಸಾ ಶುಲ್ಕಗೆ, ಆರ್ಥಿಕ ನೆರವು ನೀಡಲು ಅನುಮೋದಿಸಲಾಯಿತು. ಈ ಮೊತ್ತವನ್ನು ಪಜಾ/ಪಪಂ ಘಟಕದ ಅನುದಾನದಿಂದ ಭರಿಸಲು ಒಪ್ಪಿಗೆ ನೀಡಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 11*

**ವಿಷಯ:** ದಿನಾಂಕ:11-06-2018ರಂದು ಜರುಗಿದ ಕಟ್ಟಡ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಕಟ್ಟಡ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.***

## *ಸಿಂಡಿಕೇಟ್ ಐಟಂ ಸಂಖ್ಯೆ : 12*

**ವಿಷಯ:** ದಿನಾಂಕ:12-06-2018ರಂದು ಜರುಗಿದ ವಸತಿ ನಿಲಯ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ವಸತಿ ನಿಲಯ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.***

## *ಸಿಂಡಿಕೇಟ್ ಪುರವಣಿ ಸಂಖ್ಯೆ : 01*

ವಿಷಯ: ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಷಯಗಳ ಸಹ- ಪ್ರಾಧ್ಯಾಪಕರ ಮತ್ತು ಪ್ರಾಧ್ಯಾಪಕರ ಹುದ್ದೆಯ ಸಂದರ್ಶನ ದಿನಾಂಕ:05-07-2018 & 06-07-2018ರಂದು ಜರುಗಿದ್ದು ಸದರಿ ನೇಮಕಾತಿ ಆಯ್ಕೆ ಸಮಿತಿ(BOA) ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಸಹ- ಪ್ರಾಧ್ಯಾಪಕರ ಮತ್ತು ಪ್ರಾಧ್ಯಾಪಕರ ನೇಮಕಾತಿ ಸಂಬಂಧಿಸಿದಂತೆ ಈ ಕೆಳಗೆ ನಮೂದಿಸಿದ ವಿವಿಧ ವಿಷಯಗಳ ಆಯ್ಕೆ ಸಮಿತಿ ಶಿಫಾರಸುಗಳನ್ನು ಒಪ್ಪಿಕೊಳ್ಳಲಾಗಿದ್ದು, ನೇಮಕಾತಿ ಆದೇಶ ನೀಡಲು ಅನುಮತಿಸಿ, ಸಿಂಡಿಕೇಟ್ ಸಭೆಯು ಏಕಮತದಿಂದ ಒಪ್ಪಿಗೆ ನೀಡಿತು.**

**ಆಯ್ಕೆಯಾದ ಸಹ-ಪ್ರಾಧ್ಯಾಪಕರ & ಪ್ರಾಧ್ಯಾಪಕರ ಅಭ್ಯರ್ಥಿಗಳ ಪಟ್ಟಿ**

| ಕ್ರ.ಸಂ | ವಿವಿಧ ವಿಷಯಗಳ ಆಯ್ಕೆ ಸಮಿತಿ | ಸಭೆ ಜರುಗಿದ ದಿನಾಂಕ | ಆಯ್ಕೆಯಾದ ಅಭ್ಯರ್ಥಿಯ ಹೆಸರು | ವರ್ಗ |
|---|---|---|---|---|
| | | **ಸಹ-ಪ್ರಾಧ್ಯಾಪಕರ ಪಟ್ಟಿ** | | |
| 1. | ಕನ್ನಡ | 05-7-2018 | ಮುಂದೂಡಲಾಯಿತು | IIA |
| 2. | ಹಿಂದಿ | 05-7-5018 | Dr.Raju Bagalkot | GM(woman) |
| 3. | ಸಮಾಜಕಾರ್ಯ | 05-7-2018 | Dr.Gangadhar B Sonar | GM |
| 4. | ಮಹಿಳಾ ಅಧ್ಯಯನ | 05-7-2018 | Dr.Laxmidevi Yallappa | SC(woman) |
| 5. | ಅರ್ಥಶಾಸ್ತ್ರ | 05-7-2018 | Dr.Revanasiddappa Gangshetti | GM(Rural) |
| 6. | ದೈಹಿಕಶಿಕ್ಷಣ(ಬಿಪಿ.ಎಡ್) | 05-7-2018 | Dr.K.P.Martin | GM |
| 7. | ದೈಹಿಕಶಿಕ್ಷಣ(ಎಂಪಿ.ಎಡ್) | 05-7-2018 | Dr.Rajkumar Malipatil | GM |
| 8. | ಗ್ರಂಥಾಲಯ ಮಾಹಿತಿ ವಿಜ್ಞಾನ | 05-7-2018 | Dr.Gavisiddappa Anandhalli | GM |
| 9. | ಆಹಾರ ಸಂಸ್ಕಾರಣೆ | 6-7-2018 | Dr.Renuka Meti | IIA |
| | | | Dr.S.J.Prashant | GM(others) |
| | | **ಪ್ರಾಧ್ಯಾಪಕರ ಪಟ್ಟಿ** | | |
| 1. | ಹಿಂದಿ | 05-7-2018 | Dr.Namdev Goudar | GM(others) |
| 2. | ಶಿಕ್ಷಣ(ಎಂ.ಎಡ್) | 05-7-2018 | Dr.Basavaraj Lakkannavar | IIA(others) |
| 3. | ದೈಹಿಕಶಿಕ್ಷಣ(ಎಂಪಿ.ಎಡ್) | 05-7-2018 | Dr.Jyothidam Prakash | 371J SC |
| 4. | ಅರ್ಥಶಾಸ್ತ್ರ | 05-7-2018 | -- | -- |
| 5. | ಗಣಕವಿಜ್ಞಾನ | 6-7-2018 | Dr.Ganapatsingh | GM(others) |
| 6. | ಮಹಿಳಾ ಅಧ್ಯಯನ | 05-7-2018 | Dr.Hemalatha.M | GM(woman) |
| 7. | ಜೈವಿಕ ಮಾಹಿತಿ ವಿಜ್ಞಾನ | 6-7-2018 | Dr.C.K.Ramesh | GM(others) |

***ಸೂಚನೆ:- ಕನ್ನಡ ಸಹ-ಪ್ರಾಧ್ಯಾಪಕರ ನೇಮಕಾತಿ ಮುಂದೂಡಲಾಯಿತು***

## *ಸಿಂಡಿಕೇಟ್ ಪುರವಣಿ ಸಂಖ್ಯೆ : 02*

**ವಿಷಯ:-** ಗಣಕ ವಿಜ್ಞಾನ ಅಧ್ಯಯನ ವಿಭಾಗದ ಸಹ-ಪ್ರಾಧ್ಯಾಪಕರಿಗೆ ಸಿ.ಎ.ಎಸ್. ಅಡಿಯಲ್ಲಿ ಪ್ರಾಧ್ಯಾಪಕರೆಂದು ಪದನ್ನೋತಿ ಹಾಗೂ ಜೈವಿಕ ಮಾಹಿತಿ ವಿಜ್ಞಾನ, ಸಮಾಜಕಾರ್ಯ, ಸಮಾಜಶಾಸ್ತ್ರ, ದೈಹಿಕ ಶಿಕ್ಷಣ(ಎಂಪಿಎಡ್) ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯಲ್ಲಿ AGP ಯನ್ನು ಹೆಚ್ಚಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಗಣಕ ವಿಜ್ಞಾನ ಅಧ್ಯಯನ ವಿಭಾಗದ ಸಹ-ಪ್ರಾಧ್ಯಾಪಕರಿಗೆ ಸಿ.ಎ.ಎಸ್. ಅಡಿಯಲ್ಲಿ ಪ್ರಾಧ್ಯಾಪಕರೆಂದು ಪದನ್ನೋತಿ ನೀಡಲು, ಜೈವಿಕ ಮಾಹಿತಿ ವಿಜ್ಞಾನ ಸಹಾಯಕ ಪ್ರಾಧ್ಯಾಪಕರಿಗೆ ಗ್ರೇಡ್-1 ದಿಂದ ಗ್ರೇಡ್ – 2 ಹಾಗೂ ಸಮಾಜಕಾರ್ಯ, ಸಮಾಜಶಾಸ್ತ್ರ, ದೈಹಿಕ ಶಿಕ್ಷಣ(ಎಂಪಿಎಡ್) ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳನ್ನು ಗ್ರೇಡ್-2 ದಿಂದ ಗ್ರೇಡ್ – 3 ಯುಜಿಸಿ ನಿಯಮಾವಳಿ ಹಾಗೂ ಸಿ.ಎ.ಎಸ್‌ನ ಪರಿನಿಯಮಾವಳಿ ಅನ್ವಯ ಪರಿಶೀಲಿನಾ ಸಮಿತಿ ರಚಿಸಲಾಗಿದ್ದು. ಸದರಿ ಸಮಿತಿಯವರು ದಿನಾಂಕ: 05-07-2018 & ದಿನಾಂಕ:06-07-2018 ರಂದು ಸಂದರ್ಶನವನ್ನು ಜರುಗಿಸಿ Sealed Cover ನಲ್ಲಿ ನಡವಳಿಗಳನ್ನು ಸಲ್ಲಿಸಿರುತ್ತಾರೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಈ ಕೆಳಗೆ ಸೂಚಿಸಿರುವ ವಿವಿಧ ವಿಭಾಗಗಳ ಸಹಾಯಕ-ಪ್ರಾಧ್ಯಾಪಕರು, ಸಹ-ಪ್ರಾಧ್ಯಾಪಕರು & ಪ್ರಾಧ್ಯಾಪಕರುಗಳಿಗೆ ಬಡ್ತಿ ನೀಡಲು ಅನುಮೋದಿಸಲಾಯಿತು.**

| ಕ್ರ.ಸಂ | ಹೆಸರು | ಪರಿಶೀಲಿನಾ ಸಮಿತಿ ಸಭೆ ಜರುಗಿದ ದಿನಾಂಕ | ಸಿ.ಎ.ಎಸ್ ಅಡಿಯಲ್ಲಿ ಎಜಿ ಪಿಗೆ/ ಬಡ್ತಿ ಅರ್ಹರಾದ ದಿನಾಂಕ | ಸಿಂಡಿಕೇಟ್ ಸಭೆಯ ನಿರ್ಣಯ |
|---|---|---|---|---|
| **ಗ್ರೇಡ್-1 ದಿಂದ ಗ್ರೇಡ್ – 2(6000ದಿಂದ 7000ಕ್ಕೆ)** | | | | |
| **1.** | ಡಾ.ಬಾಬು ಲಮಾಣಿ, ಜೈವಿಕ ಮಾಹಿತಿ ವಿಜ್ಞಾನ ವಿಭಾಗ | **6-7-2018** | **14-8-2017** | **ಅನುಮೋದಿಸಲಾಯಿತು.** |
| **ಗ್ರೇಡ್-2 ದಿಂದ ಗ್ರೇಡ್ – 3(7000ದಿಂದ 8000ಕ್ಕೆ)** | | | | |
| **2.** | ಡಾ.ರಮೇಶ ಸೋನಕಾಂಬಳೆ, ಸಮಾಜಕಾರ್ಯ ಅಧ್ಯಯನ ವಿಭಾಗ | **6-7-2018** | **12-10-2017** | **ಅನುಮೋದಿಸಲಾಯಿತು.** |
| **3.** | ಡಾ.ಎಂ.ಪಿ.ಬಳಿಗಾರ, ಸಮಾಜಶಾಸ್ತ್ರ ಅಧ್ಯಯನ ವಿಭಾಗ | **5-7-2018** | **13-7-2017** | **ಅನುಮೋದಿಸಲಾಯಿತು.** |
| **4.** | ಡಾ.ಕೆ.ಪಿ.ಮಾರ್ಟಿನ್, ದೈಹಿಕ ಶಿಕ್ಷಣ(ಬಿಪಿ.ಎಡ್) ಅಧ್ಯಯನ ವಿಭಾಗ | **5-7-2018** | **11-2-2017** | **ಅನುಮೋದಿಸಲಾಯಿತು.** |
| **ಸಿ.ಎ.ಎಸ್ ಅಡಿಯಲ್ಲಿ ಸಹ-ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರ ಬಡ್ತಿ** | | | | |
| **5.** | ಡಾ.ರಮೇಶ.ಕೆ, ಗಣಕ ವಿಜ್ಞಾನ ಅಧ್ಯಯನ ವಿಭಾಗ. | **6-7-2018** | **6-9-2017** | **ಅನುಮೋದಿಸಲಾಯಿತು.** |

## *ಸಿಂಡಿಕೇಟ್ ಪುರವಣಿ ಸಂಖ್ಯೆ : 03*

ವಿಷಯ: ಶ್ರೀ.ಎಸ್.ಸಿ.ಇನಾಮದಾರ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರರು ಇವರನ್ನು ಗೌರವಧನ ಆಧಾರದ ಮೇಲೆ ನೇಮಕ ಮಾಡುವ ಕುರಿತು.

ಉಲ್ಲೇಖ:– ಶ್ರೀ.ಎಸ್.ಸಿ. ಇನಾಮದಾರ ನಿವೃತ್ತ ಕಾರ್ಯನಿರ್ವಹಕ ಇಂಜಿನಿಯರರು ಇವರ ಮನವಿ ಪತ್ರ ದಿನಾಂಕ:5–7–2018.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀ.ಎಸ್.ಸಿ.ಇನಾಮದಾರ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರರಾಗಿ ಲೋಕೋಪಯೋಗಿ ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಜಯಪುರದಲ್ಲಿ ಕಾರ್ಯನಿರ್ವಹಿಸಿ ದಿನಾಂಕ:30–04–2018ರಂದು ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಕಟ್ಟಡ ಕಾಮಗಾರಿಗಳು ಅನೇಕ ನಡೆಯುತ್ತಿರುವುದರಿಂದ ಇವರ ಸೇವೆ ವಿಶ್ವವಿದ್ಯಾನಿಲಯಕ್ಕೆ ಅವಶ್ಯಕ ಇರುವುದನ್ನು ಗಮನಿಸಿ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಸ್ಥಾನಿಕ ಅಭಿಯಂತರರ ಹುದ್ದೆಗೆ ಗೌರವಧನ ಆಧಾರದ ಮೇಲೆ ನೇಮಕ ಮಾಡುವ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–* ಶ್ರೀ.ಎಸ್.ಸಿ.ಇನಾಮದಾರ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು, ಇವರಿಗೆ ವಿಶ್ವವಿದ್ಯಾನಿಲಯದಲ್ಲಿ ಸ್ಥಾನಿಕ ಅಭಿಯಂತರರಾಗಿ ಗೌರವಧನ ಆಧಾರದ ಮೇಲೆ ನೇಮಕ ಮಾಡಲು ಅನುಮೋದಿಸಲಾಯಿತು. ಶ್ರೀ.ಬಿ.ಕೆ.ಪಾಟೀಲ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಅವರನ್ನು ಮೂಲ ಸಂಸ್ಥೆಗೆ ಹಿಂದಿರುಗಿಸಲು ಸಭೆಯು ಒಪ್ಪಿಗೆ ನೀಡಿತು.**

## *ಸಿಂಡಿಕೇಟ್ ಪುರವಣಿ ಸಂಖ್ಯೆ : 04*

ವಿಷಯ: M/s Keradi Construction ಕಾಮಗಾರಿಗಳ ಗುತ್ತಿಗೆ ಬಗ್ಗೆ ಕಾನೂನು ಸಲಹೆ ಅನುಷ್ಠಾನಗೊಳಿಸುವ ಕುರಿತು.

ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಸ್ನಾತಕೋತ್ತರ ವಸತಿನಿಲಯದ ಕಟ್ಟಡ ಕಾಮಗಾರಿಯನ್ನು M/s Keradi Construction Pvt Limited ಪ್ರಥಮ ದರ್ಜೆ ಲೋಕೋಪಯೋಗಿ ಇಲಾಖೆಯ ಗುತ್ತಿಗೆದರರು, ಬೆಂಗಳೂರು ಇವರಿಗೆ ಟೆಂಡರ್ ಮೂಲಕ ವಹಿಸಿ ಕೊಡಲಾಗಿತ್ತು. ಈ ಎಲ್ಲ ಕಾಮಗಾರಿಗಳನ್ನು ಅನುಕ್ರಮವಾಗಿ ದಿನಾಂಕ:2–11–2015, 2–1–2015 ಹಾಗೂ 2–5–2018ದಿನಾಂಕದ ಒಲಗೆ ಕರಾರು ಪತ್ರದ ಪ್ರಕಾರ ಮುಗಿಸಬೇಕಾಗಿತ್ತು. ಅದರಂತೆ ಸದರಿಯವರು ಕೇಲಸ ಪ್ರಾರಂಭಿಸಿ ತದನಂತರ ಕಾಮಗಾರಿಗಳನ್ನು ಅರ್ಧಕ್ಕೆ ನಿಲ್ಲಿಸಿ, ದಿನಾಂಕ:21–02–2018ರ ಪತ್ರದಲ್ಲಿ ವೈಯಕ್ತಿಕ ಕುಟಂಬ ಕಾರಣಗಳನ್ನು ನೀಡಿ ಈ ಗುತ್ತಿಗೆಯಿಂದ ಕೈಬೀಡಲು ಕೋರಿರುತ್ತಾರೆ.

ದಿನಾಂಕ:15–3–2018ರ ಸಿಂಡಿಕೇಟ್ ನಿರ್ಣಯದಂತೆ ಸದರಿ ವಿಷಯದ ಬಗ್ಗೆ ಹೆಚ್ಚಿನ ಕಾನೂನು ಸಲಹೆ ಪಡೆಯಲು ಶ್ರೀ.ಸತೀಶ ಕೆ.ಆರ್ ಬೆಂಗಳೂರು ಇವರಿಗೆ ದಿನಾಂಕ:29–5–2018ರಂದು ಪತ್ರ ಬರೆಯಲಾಗಿತ್ತು.

ಸದರಿ ವಿಷಯದ ಬಗ್ಗೆ ಕಾನೂನು ಸಲಹೆಗಾರರು ಅವರ ಪತ್ರ ದಿನಾಂಕ:15–6–2018ರಲ್ಲಿ ಈ ಕೆಳಗಿನಂತೆ ಸೂಚಿಸಿರುತ್ತಾರೆ.

"ಈಗಾಗಲೇ ವಿಶ್ವವಿದ್ಯಾನಿಲಯದಿಂದ M/s Keradi Construction Pvt Limited ಕಂಪನಿಗೆ ಮಾಡಿಕೊಂಡ ಕರಾರು ಪತ್ರದ ನಿಯಮಗಳನ್ನು M/s Keradi Construction Pvt Limited ಇವರು ಉಲಂಘಿಸುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇದುವರೆಗೂ M/s Keradi Construction Pvt Limited ಅವರು ತೆಗೆದುಕೊಂಡಿರುವ ಹಣಕ್ಕೆ ಸರಿಸಮಾನವಾಗಿ ಬಿಲ್ಡಿಂಗ್ ಕೆಲಸ ಮಾಡಿದ್ದಾರೆಯೇ ಅಥವಾ ಇಲ್ಲವೇ ಎಣಬುದರ ಬಗ್ಗೆ ಇನ್ನೊಂದು ಬಾರಿ ವಿಶ್ವವಿದ್ಯಾನಿಲಯದವರು ಇಂಜಿನಿಯರ್‌ಗಳಿಂದ ಪರಿಶೀಲಿಸುವುದು ಈ ಸಂದರ್ಭದಲ್ಲಿ ಅಗತ್ಯವಿರುತ್ತದೆ. ಕಾರಣ M/s Keradi Construction Pvt Limited PWD No-1 ಗುತ್ತಿಗೆದಾರರು ದಿನಾಂಕ:21–02–2018 ರಂದು ವಿಶ್ವವಿದ್ಯಾನಿಲಯಕ್ಕೆ ಕೊಟ್ಟ ಪ್ರಮಾಣ ಪತ್ರದಲ್ಲಿ ವೈಯಕ್ತಿಕ, ಕುಟಂಬ ಕಾರಣಗಳನ್ನು ಕೊಟ್ಟು ಈ ಗುತ್ತಿಗೆಯಿಂದ ದೂರ ಉಳಿಯಲು ಕೈಬಿಡಲು ಕೋರಿರುತ್ತಾರೆ. ಆದರೆ ಕಾನೂನಿನಲ್ಲಿ ಅದಕ್ಕ ಅವಕಾಶವಿರುವದಿಲ್ಲ. ಕಾರಣ ಗುತ್ತಿಗೆದಾರರ Work Order date 3–11–2014ರಂದು

ಪಡೆದಿದ್ದು ಎಸ್‌ಆರ್ ದರಪಟ್ಟಿ ರೇಟ್ Schedule of Rate Year, ಈ ದಿನಾಂಕ Schedule of Rate Year ಗೆ, ಮಟೇರಿಯಲ್ ರೇಟ್, ಟ್ಯಾಕ್ಸ್, ಲೇಬರ್ ರೇಟ್ ಹೆಚ್ಚಳವಾಗಿರುತ್ತದೆ. ಈ ಹಂತದಲ್ಲಿ ಆ ಕಂಪನಿಯ ಗುತ್ತಿಗೆ ಕರಾರು ಪತ್ರವನ್ನು ರದ್ದು ಪಡಿಸಬೇಕಾದರೆ ಮುಂದೆ ಕಟ್ಟಡ ಕಟ್ಟಲು ತಗಲುವ ಅಧಿಕ ಆರ್ಥಿಕ ಹೊರೆ ವಿಶ್ವವಿದ್ಯಾನಿಲಯಕ್ಕೆ ತಗಲುವುದರಿಂದ, ಈ ಎಲ್ಲ ಹೆಚ್ಚುವರಿ ಆರ್ಥಿಕ ವೆಚ್ಚವನ್ನು ಗುತ್ತಿಗೆ ಪಡೆದಿರುವ ಕಂಪನಿ ಭರಿಸಬೇಕಾಗಿರುತ್ತದೆ.”

ಈ ಮೇಲ್ಕಂಡ ಕಾನೂನು ತೊಡಕುಗಳಿಂದ/ಕಾರಣಗಳಿಂದ ವಿಶ್ವವಿದ್ಯಾನಿಲಯದ ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಗುತ್ತಿಗೆದಾರರನ್ನು ಮತ್ತೊಮ್ಮೆ ಕರೆದು ಮಾತುಕತೆಯ ಮೂಲಕ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸುವುದು ಸೂಕ್ತವೆಂದು ತಿಳಿಸಬಯಸುತ್ತೇನೆ.

ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಮುಂದಿನ ಸೂಕ್ತ ನಿರ್ದೇಶನಕ್ಕಾಗಿ ಮಂಡಿಸಿದೆ.

***ನಿರ್ಣಯ:- ಕಾನೂನು ಸಲಹೆಯನ್ನು ಅನುಷ್ಠಾನಗೊಳಿಸಲು ಒಪ್ಪಿಕೊಳ್ಳಲಾಯಿತು.***
***(ವಿಶ್ವವಿದ್ಯಾನಿಲಯದ ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಗುತ್ತಿಗೆದಾರರನ್ನು ಮತ್ತೊಮ್ಮೆ ಕರೆದು ಮಾತುಕತೆಯ ಮೂಲಕ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸುವುದು ಸೂಕ್ತವೆಂದು ತಿಳಿಸಸುತ್ತೇನೆ.)***

**ಕುಲಸಚಿವರು ಪ್ರೊ.ಎಲ್.ಆರ್.ನಾಯಕ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ ಹಾಗೂ ಮೌಲ್ಯಾಧಾರಿತ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿಗಳು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ